# ತುಮಕೂರು ಭಾಗದ ಬಿಡಿಸಲಾಗದ ಒಗಟುಗಳು

**ಎಂ.ಎನ್. ದಿನೇಶ್***

**DOI: https://doi.org/10.5281/zenodo.22252690**

**ABSTRACT**

ಕೆ. ಸಣ್ಣಹೊನ್ನಯ್ಯ ಅವರು ಸಂಗ್ರಹಿಸಿರುವ "ತುಮಕೂರು ಭಾಗದ ಬಿಡಿಸಲಾಗದ ಒಗಟುಗಳು" ಕೃತಿಯು ಕನ್ನಡ ಜಾನಪದ ಸಾಹಿತ್ಯಕ್ಕೆ ನೀಡಿದ ಮಹತ್ವದ ಕೊಡುಗೆಯಾಗಿದೆ. ತುಮಕೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಈ ಕೃತಿಯು ಒಗಟುಗಳ ಸಾಂಸ್ಕೃತಿಕ, ಬೌದ್ಧಿಕ ಹಾಗೂ ಹಾಸ್ಯಮಯ ನೆಲೆಗಳನ್ನು ಸೊಗಸಾಗಿ ಅನಾವರಣಗೊಳಿಸುತ್ತದೆ. ಜಗತ್ತಿನ ಮತ್ತು ನಾಡಿನ ವಿವಿಧ ಒಗಟುಗಳ ಸ್ವರೂಪವನ್ನು ಚರ್ಚಿಸುತ್ತಲೇ, ತುಮಕೂರು ಭಾಗದ ವಿಶಿಷ್ಟ ಕೃಷಿ ಸಂಸ್ಕೃತಿಯನ್ನು (ವಿಶೇಷವಾಗಿ ತೆಂಗು, ಅಡಿಕೆ, ಬಾಳೆ) ಪ್ರತಿನಿಧಿಸುವ ಒಗಟುಗಳ ಮೇಲೆ ಇಲ್ಲಿ ವಿಶೇಷ ಬೆಳಕು ಚೆಲ್ಲಲಾಗಿದೆ. ಮನುಷ್ಯನ ಕಲ್ಪನಾಶಕ್ತಿ ಮತ್ತು ಬುದ್ಧಿಮತ್ತೆಯನ್ನು ಒರೆಗೆ ಹಚ್ಚುವ ಪ್ರಶ್ನೋತ್ತರ, ಗಣಿತ ಹಾಗೂ ಪದಸಮಸ್ಯೆಗಳ ಒಗಟುಗಳನ್ನು ಉದಾಹರಣೆಗಳ ಸಹಿತ ವಿಶ್ಲೇಷಿಸಲಾಗಿದೆ. ಪ್ರಾದೇಶಿಕ ಸೊಗಡಿನೊಂದಿಗೆ ಜಾನಪದದ ಸಾರ್ವತ್ರಿಕ ಮೌಲ್ಯವನ್ನು ಎತ್ತಿಹಿಡಿಯುವ ಈ ಅಧ್ಯಯನವು, ಕೃತಿಯ ಸಮಗ್ರತೆಯನ್ನು ಮತ್ತು ಅದರ ಸಾಹಿತ್ಯಿಕ ಮಹತ್ವವನ್ನು ಕಟ್ಟಿಕೊಡುತ್ತದೆ.

**KEYWORDS:** ಒಗಟುಗಳು, ಜಾನಪದ ಸಾಹಿತ್ಯ, ತುಮಕೂರು ಪ್ರಾದೇಶಿಕತೆ, ಕೃಷಿ ಸಂಸ್ಕೃತಿ, ಅರ್ಥಗೋಪನ.

* **ಡಾ. ಎಂ.ಎನ್. ದಿನೇಶ್,** ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನೆಲಮಂಗಲ, ಬೆಂಗಳೂರು ಗ್ರಾಮಾಂತರ.

ಕರ್ನಾಟಕ ಸರ್ಕಾರ ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ತುಮಕೂರು ವಿಶ್ವವಿದ್ಯಾಲಯ ಪ್ರಕಟಿಸಿರುವ ಕೆ.ಸಣ್ಣಹೊನ್ನಯ್ಯನವರ ಕೃತಿಯಾದ "ತುಮಕೂರು ಭಾಗದ ಬಿಡಿಸಲಾಗದ ಒಗಟುಗಳು" ಕೃತಿಯನ್ನು ಕುರಿತು ಕೆಲವು ಮಾತುಗಳನ್ನು ಹೇಳುವುದಾದರೆ, ಕೆ.ಸಣ್ಣಹೊನ್ನಯ್ಯ ಕಂಟಲಗೆರೆಯವರು ನಾಡಿನ ಪ್ರಸಿದ್ಧ ಜಾನಪದ ವಿದ್ವಾಂಸರು ಹಾಗೂ ಜನಪದ ಕಲಾವಿದರು. ಇವರು ಸಂಗ್ರಹಿಸಿ ಈ ಕೃತಿಯಲ್ಲಿ ಒಗಟುಗಳ ವಿಚಾರವಾಗಿ ಸಮರ್ಥವಾಗಿ ಹಾಗೂ ಕರ್ನಾಟಕದ ಯಾವುದೇ ವಿದ್ವಾಂಸರು ಇಷ್ಟರಮಟ್ಟಿಗೆ ಸಮಗ್ರವಾಗಿ ಹಾಗೂ ಅರ್ಥಪೂರ್ಣವಾಗಿ ಒಗಟುಗಳನ್ನು ಕುರಿತು ಪುಸ್ತಕ ರೂಪದಲ್ಲಿ ತಂದಿಲ್ಲವೆಂದೇ ಹೇಳಬಹುದು.

ಲೇಖಕರು ಕೃತಿಯನ್ನು ಪರಿಚಯಿಸುವಲ್ಲಿ ಒಗಟುಗಳ ಸಮಗ್ರ ಅರ್ಥವನ್ನು ಸ್ಪಷ್ಟಪಡಿಸುತ್ತಾ, ಜನಪದ ಸಾಹಿತ್ಯ ಪ್ರಕಾರದಲ್ಲಿ ಗೀತೆ, ಕಥೆ, ಗಾದೆಗಳಂತೆ ಭಾರತೀಯ ಸಂಸ್ಕೃತಿಯಲ್ಲಿ ಒಗಟು ಕೂಡ ಪ್ರತ್ಯೇಕ ಅಸ್ತಿತ್ವವುಳ್ಳ ಪ್ರಕಾರವೆಂದು ಹೇಳಬಹುದು. ಇಂಗ್ಲಿಷ್‌ನಲ್ಲಿ ಇದಕ್ಕೆ 'Riddle' ಎಂದು, ಇದರ ಅರ್ಥ 'to give advice' ಎಂದು, ಕನ್ನಡದಲ್ಲಿ ಒಗಟು, ಒಡಪು, ಒಡಗಥೆ ಮುಂತಾದ ಅರ್ಥ ವಿವರಣೆಯನ್ನು ನೀಡಿದ್ದಾರೆ.

ಮನುಷ್ಯನು ಸಮಾಜಜೀವಿ. ಈ ಮನುಷ್ಯ ತನ್ನ ಬುದ್ಧಿವಂತಿಕೆಯನ್ನು, ಊಹೆಯನ್ನು, ಕಲ್ಪನಾಶಕ್ತಿಯನ್ನು ಒಗಟು, ಗಾದೆ, ಕಥೆಗಳ ರೂಪದಲ್ಲಿ ಅಭಿವ್ಯಕ್ತಿಪಡಿಸಿದ್ದನ್ನು ಬುದ್ಧಿ ಪ್ರಧಾನವುಳ್ಳ ಮಾತು ಎಂಬುದನ್ನು ಸ್ಪಷ್ಟಪಡಿಸುತ್ತಾ, ಒಗಟಿನ ಪ್ರಧಾನ ಲಕ್ಷಣವೆಂದರೆ ಅರ್ಥಗೋಪನ ಕ್ರಿಯೆ. ವಾಸ್ತವ ಅರ್ಥವನ್ನು ಮುಚ್ಚಿಡುವ ರೀತಿಯಲ್ಲಿ ಇದು, ಇದರಲ್ಲಿ ಮೊದಲು ಗಮನಕ್ಕೆ ಬರುವುದು ಪ್ರಶ್ನೆ, ಎರಡನೆಯದಾಗಿ ನಿಲ್ಲುವುದು ಉತ್ತರ. ಪ್ರಶ್ನೆಯಲ್ಲಿ ಸಂಗತಿ ಒಂದು ರೂಪಕದ ರೂಪದಲ್ಲಿ ಗೋಪ್ಯವಾಗಿರುತ್ತದೆ.

ಒಗಟಿನ ಮತ್ತೊಂದು ಲಕ್ಷಣವೆಂದರೆ ಹಾಸ್ಯಮಯತೆ, ಪ್ರಕೃತಿ ಸಾಮ್ಯತೆ ಹಾಗೂ ಕೆಲವು ಒಗಟುಗಳು, ಪದಗಳು ಅಶ್ಲೀಲವಾಗಿದ್ದರೂ ಒಳಅರ್ಥದಲ್ಲಿ ಅತ್ಯಂತ ಶುದ್ಧವಾಗಿರುತ್ತದೆ. ಲೇಖಕರು ಪ್ರಾಚೀನ ಗ್ರೀಕ್, ಹೀಬ್ರೂ, ಸಂಸ್ಕೃತ, ವಿದೇಶಿ ವಿದ್ವಾಂಸರು, ತತ್ವಶಾಸ್ತ್ರಜ್ಞರು ಮುಂತಾದವರ ವ್ಯಾಖ್ಯಾನಗಳನ್ನು, ಅವರು ವಿವರಿಸುವ ಅರ್ಥ, ಕಾರಣ, ಇತ್ಯಾದಿ ಅಂಶಗಳನ್ನು ಗುರುತಿಸುತ್ತಾರೆ. ಈ ಕೃತಿಯಲ್ಲಿ ಅಲ್ಲದೆ ಜೇಮ್ಸ್ ಎ.ಕೆಲ್ಲೊರವರು ಗುರುತಿಸಿರುವ ಆರು ನಮೂನೆಯ ಒಗಟುಗಳನ್ನು ವಿವರಿಸುತ್ತಾರೆ.

1. ಪದವೊಂದರಲ್ಲಿ ಕ್ಲಿಷ್ಟತೆ ಏಕೀಕೃತವಾಗಿದ್ದು, ದ್ವಂದ್ವಾರ್ಥದಲ್ಲಿ ದಿಗ್ಭ್ರಮೆ ಹಿಡಿಸುವುದು.
2. ತಾಂತ್ರಿಕತೆ ಕಡಿಮೆ ಇರುವ ಅತ್ಯಂತ ಪ್ರಮುಖವಾದ ಗೂಢಾರ್ಥದ್ಯೋತಕ.
3. ಪಾದ್ರಿಗಳು ಬೋಧನೆ ಮಾಡುವಾಗ ಅರ್ಥವತ್ತಾಗಿ ಮಾಡುವುದಕ್ಕಾಗಿ

ಅರ್ಥಾಂತರರೋಕ್ತಿಯನ್ನು ಬಳಸುತ್ತಿದ್ದರು. ಇವುಗಳನ್ನು, ಅನ್ಯೋಕ್ತಿಗಳನ್ನು ಒಗಟೆಂದು ಕರೆಯುತ್ತಿದ್ದರು.

4. ಚಿತ್ರಶಬ್ದದ ಒಗಟುಗಳು, ಪದ ಅಥವಾ ಅಕ್ಷರಗಳಲ್ಲಿ ವಸ್ತುವನ್ನು ಚಿತ್ರಿಸುವುದೇ ಇದು.
5. ಪದಸಮಸ್ಯೆ ಒಗಟು, ಪ್ರತಿ ಅಕ್ಷರವನ್ನಾಗಲಿ ಕೆಲವು ವೇಳೆ ಒಟ್ಟು ಪದವನ್ನಾಗಲಿ ಒಗಟಿನ ರೂಪದಲ್ಲಿಯೋ ನಟನೆಯ ಮೂಲಕವೋ ಸೂಚಿಸುವಾಗ ಊಹೆಯಿಂದ ಕಂಡುಹಿಡಿಯುವುದು ಪದ ಸಮಸ್ಯೆ ಎನಿಸಿಕೊಳ್ಳುತ್ತದೆ.
6. ಗಣಿತ ಸಂಬಂಧವಾದ ಒಗಟುಗಳು, ಮರೆಯುವಂತಿಲ್ಲ ಅಂಕಿಗಳ ಮೂಲಕ ಇದು ರೂಪಿತವಾಗಿರುತ್ತವೆ.

**ಉದಾ:**

ನಾವು

ನಮ್ಮಷ್ಟು

ನಮ್ಮರ್ಧ

ನಮ್ಮಾಲು

ನೀನು ಸೇರಿದರೆ ನೂರು

ಹಾಗಾದರೆ ಬಂದ ಗಿಳಿಗಳೆಷ್ಟು?

ಒಂದು ಜೋಳದ ಹೊಲ, ಅದರಲ್ಲಿ ಗಿಳಿ ಕುಳಿತಿರುತ್ತದೆ. ಮತ್ತೆ ಕೆಲವು ಗಿಳಿಗಳು ಅಲ್ಲಿಗೆ ಬರುತ್ತವೆ. ಆಗ ಕುಳಿತಿದ್ದ ಮೊದಲ ಗಿಳಿ ಬಂದ ಗಿಳಿಗಳನ್ನು 'ಎಷ್ಟು ಗಿಳಿಗಳು ಬಂದಿರಿ?' ಎಂದು ಪ್ರಶ್ನಿಸುತ್ತದೆ. ಆಗ ಉಳಿದ ಗಿಳಿಗಳು ಮೇಲಿನ ರೀತಿಯಲ್ಲಿ ಹೇಳುತ್ತವೆ. ಇದಕ್ಕೆ ಉತ್ತರ 36. ಬಂದ ಗಿಳಿಗಳು 36, ಅವರಷ್ಟು ಅಂದರೆ 36 ಸೇರಿದರೆ 72 ಗಿಳಿಗಳಾಗುತ್ತವೆ. ಇದಕ್ಕೆ ಅವುಗಳ ಅರ್ಧ 18 ಮತ್ತು ಕಾಲುಭಾಗ 9ನ್ನು ಸೇರಿಸಿದರೆ 99 ಆಗುತ್ತದೆ. ಇದಕ್ಕೆ ಮೊದಲು ಕುಳಿತಿದ್ದ ಗಿಳಿಯನ್ನು ಸೇರಿಸಿದರೆ 100 ಆಗುತ್ತದೆ. ಇಂಥ ಒಗಟುಗಳು ಬುದ್ಧಿಗೆ ಸಾಕಷ್ಟು ವ್ಯಾಯಾಮವನ್ನು ಕೊಡುತ್ತವೆಂದೇ ಹೇಳಬಹುದು.

ಈ ತರದ ಒಗಟುಗಳಲ್ಲದೆ, ಪ್ರಶ್ನೋತ್ತರ ಒಗಟುಗಳು, ಸ್ಪರ್ಧಾರೂಪದ ಒಗಟುಗಳು, ಪಂದ್ಯ, ಜೂಜು, ಸ್ಪರ್ಧೆ ಇವುಗಳು ಇಲ್ಲಿನ ಮುಖ್ಯ ಮನೋಭಾವಗಳು. ಒಬ್ಬರು ಒಡ್ಡಿದ್ದನ್ನು ಇನ್ನೊಬ್ಬರು ಒಡೆಸಬೇಕು. ಗೆದ್ದವರಿಗೆ ಉಡುಗೊರೆ, ಸೋತವರಿಗೆ ಶಿಕ್ಷೆ.

ಈ ತರದ ಒಗಟುಗಳನ್ನು ಲೇಖಕರು ಈ ಕೃತಿಯಲ್ಲಿ ವಿವರಿಸಿದ್ದಾರೆ. ಇದಲ್ಲದೆ

ಪ್ರಾಚೀನ ಗ್ರೀಕರು, ಇಂಗ್ಲೆಂಡಿನ ಕೆಲ ಸಾಹಿತಿಗಳು ಹೊಸ ಹೊಸ ತರದ ಒಗಟುಗಳನ್ನು ಸೃಷ್ಟಿಸಿರುವುದನ್ನು ಹೇಳುತ್ತಾರೆ. ಕನ್ನಡದಲ್ಲಿ ಕಂತಿ ಹಂಪನ ಸಮಸ್ಯೆಗಳು, ಹರಿಹರನ ಮುಡಿಗೆಯ ಅಷ್ಟಕ ಕೃತಿ, ಒಗಟಿನ ರೂಪದಲ್ಲಿ ಇರುವ ಮತ್ತೊಂದು ಪ್ರಭೇದಗಳಾಗಿವೆ. ಬೆಡಗಿನ ವಚನಗಳು ಸಹ ಬಹುತೇಕವಾಗಿ ಜಾನಪದವಲ್ಲ. ಒಗಟಿನಿಂದ ಪ್ರಭಾವಿಸಿ ಇದೇ ರೀತಿಯ ಒಗಟಿನ ರೀತಿಯ ಪದ್ಯಗಳನ್ನು ರಚಿಸಿರುವ ವಿಚಾರಗಳನ್ನು ಬರೆದಿರುವ ರೂಪವನ್ನು ಇಲ್ಲಿ ಕಾಣಬಹುದು. ಕನಕದಾಸರು, ಪುರಂದರದಾಸರು ಸಹ ತಿಳಿಸುತ್ತಾರೆ.

ಒಟ್ಟಾರೆಯಾಗಿ ಒಗಟುಗಳು ಮಾನವನ ಪ್ರತಿನಿತ್ಯದ ಬದುಕಿನಲ್ಲಿ ಪ್ರಕೃತಿಯ ವಸ್ತು ವಿಚಾರಗಳನ್ನು ಕುರಿತು ಸಾವಿರಾರು ಒಗಟುಗಳಿವೆ. ಈ ಒಗಟು ಪ್ರಾದೇಶಿಕ ಜನಾಂಗ, ಧರ್ಮ, ದೇಶಗಳಲ್ಲಿ ಭಿನ್ನವಾಗಿ ಕೆಲವೊಂದು ಸಾರಿ ಸಾಮ್ಯತೆಯಿರುವ ಒಗಟುಗಳನ್ನು ಕಾಣಬಹುದಾಗಿದೆ.

ಕೆ.ಸಣ್ಣಹೊನ್ನಯ್ಯ ಕಂಟಲಗೆರೆಯವರು ಸಂಗ್ರಹಿಸಿರುವ “ತುಮಕೂರು ಭಾಗದ ಬಿಡಿಸಲಾಗದ ಒಗಟುಗಳು” ಕೃತಿಯಲ್ಲಿ ಇರುವ ಒಗಟುಗಳು ಕರ್ನಾಟಕದಾದ್ಯಂತ ಈ ತರಹದ ಒಗಟುಗಳು ಸಾಮಾನ್ಯವಾಗಿ ಎಲ್ಲಾ ಕಡೆ ಒಂದೇ ರೀತಿ ಇರುತ್ತವೆ. ಆದರೆ ಈ ಕೃತಿಯಲ್ಲಿ ತುಮಕೂರು ಭಾಗದ ಒಗಟುಗಳೆಂದೇ ಗುರುತಿಸಬಹುದಾದ ಅನೇಕ ವಿಚಾರದ ಒಗಟುಗಳು ಸಹ ಇವೆ. ಉದಾಹರಣೆಯಾಗಿ ಹೇಳುವುದಾದರೆ, ತೆಂಗು, ಬಾಳೆ, ಅಡಿಕೆ, ವೀಳೆದೆಲೆ, ಮಲ್ಲಿಗೆ ಹೂ, ಹುಣಿಸೆಕಾಯಿ ಮುಂತಾದವು ಕೃಷಿಗೆ ಸಂಬಂಧಿಸಿದವು. ಈ ಪುಸ್ತಕದಲ್ಲಿ ಹೆಚ್ಚಾಗಿರುವುದು, ಅದರಲ್ಲಿಯೂ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಒಗಟುಗಳಿರುವುದು ಈ ಪುಸ್ತಕದ ವಿಶೇಷ.

**ಉದಾ:**

**ತೆಂಗಿನ ವಿಚಾರವಾಗಿ**

1. ಕಪ್ಪೆ ಮುಟ್ಟದ ಕೋಲಾರದ ನೀರು – ಎಳನೀರು
2. ಅಗಸ ಮಾಡಿದ ಮಡಿಯಲ್ಲ, ಕುಂಬಾರ ಮಾಡಿದ ಮಡಿಕೆಯಲ್ಲಿ ಸೂರ್ಯನ ಕಣ್ಣಿಗೆ ಹೊಳಪಿಲ್ಲ – ತೆಂಗಿನಕಾಯಿ
3. ಹಸಿರು ಬಾಡಲ್ಲ, ನೆಟ್ಟರೆ ಬೆಳೆಯೋಲ್ಲ – ಎಳನೀರು
4. ಜುಟ್ಟ ಹುಡುಗಿ ದೇವರಿಗೆ ಹೊರಟಾಳೆ – ತೆಂಗಿನಕಾಯಿ
5. ಒಂಟಿ ಸಿಪಾಯಿ ಭಾರ ಹೊತ್ತಿದ್ದಾಗ, ಒಬ್ಬರು ಮಾಡಿದ ಉಪಕಾರಕ್ಕೆ ಹಲವು ಜನರಿಗೆ ಉಪಕಾರ ತೀರಿಸುತ್ತಾನೆ – ತೆಂಗಿನಮರ
6. ಅವ್ವ ತಲೆಗೆದರಿ ಮಗಳು ಸುಭದ್ರಿ – ತೆಂಗಿನಮರ

7. ಚಿಪ್ಪುಂಟು ಆಮೆಯಲ್ಲ, ಜುಟ್ಟುಂಟು ಪೂಜಾರಿಯಲ್ಲ, ಮೂರು ಕಣ್ಣುಂಟು ಹರನಲ್ಲ, ಹಾಗಾದರೆ ನಾನು ಯಾರು? – ತೆಂಗಿನಕಾಯಿ
8. ಮಣ್ಣು ಅಗೆದೆ ಕಲ್ಲು ಸಿಕ್ಕಿತು, ಕಲ್ಲು ಅಗೆದೆ ಬೆಳ್ಳಿ ಸಿಕ್ಕಿತು, ಬೆಳ್ಳಿ ಒಡೆದೆ ನೀರು ಸಿಕ್ಕಿತು – ತೆಂಗಿನಕಾಯಿ
9. ಕತ್ತೆ ಮುಟ್ಟದ ಬಾವಿ, ಎಡಿ ಮುಟ್ಟದ ಬಾವಿ, ಅಂತರದಲ್ಲಿ ಬಾವಿ, ಅರ್ಧಬಾವಿ – ತೆಂಗಿನಕಾಯಿ
10. ದೊಡ್ಡಣ್ಣ ನಿನ್ನ ತಲೆಮೇಲೆ ಕಸ, ಹೊಟ್ಟೆಯೊಳಗೆ ಸೀರಸ, ಪಕ್ಕದಲ್ಲಿ ಬಿಳಿ ಪಾದರಸ – ತೆಂಗಿನಕಾಯಿ
11. ಎಲ್ಲಿಂದಲೋ ಬಂದಿದ್ದವು ಮುತ್ತಿನ ಡೇರೆ ಹೊಡೆದಿದ್ದವು, ಪಾಪಿದೃಷ್ಟಿಗೆ ಬಿದ್ದಿದ್ದವು, ದಿಕ್ಕಾಪಾಲಾಗಿ ಓಡಿದವು – ತೆಂಗಿನಕಾಯಿ
12. ಗುಡ್ಡದ ಮೇಲೆ ಗುರು ಸಿದ್ದವ್ವ, ವರುಷಕ್ಕೊಮ್ಮೆ ಕರೆಸಿದ್ದವ್ವ – ತೆಂಗಿನಕಾಯಿ
13. ಒಂದು ಅರಗೆರೆ, ಬರಿಗೆರೆ, ತುಂಬುಗೆರೆ – ತೆಂಗಿನಕಾಯಿ

**ಬಾಳೆ ವಿಚಾರವಾಗಿ**

1. ಅಂಗಿ ಕಳಿ ಬಾವ್ಯಾಗ ಇಳಿ – ಬಾಳೆಹಣ್ಣು
2. ಕೊಕ್ಕರೆಹಲ್ಲಿನ ಮಗಹುಟ್ಟಿ ತಾಯಿಗೆ ಮರಣ – ಬಾಳೆಗೊನೆ
3. ಸಾಹುಕಾರ ಮುಂದೆ ಸಾವಿರಜನ ಹಿಂದೆ – ಬಾಳೆಗೊನೆ
4. ಅಲ್ಲೊಂದು ಕಂಬ ಇಲ್ಲೊಂದು ಕಂಬ, ನೂರೊಂದು ಕಾಯಿ, ವರ್ಷಕ್ಕೊಂದೇ ಫಲ – ಬಾಳೆಗಿಡ
5. ಒಂದು ಹಸ್ತಕ್ಕೆ ನೂರೆಂಟು ಬೆರಳು – ಬಾಳೆಗೊನೆ
6. ಚಿನ್ನ ಎಸೆಯುತ್ತಾರೆ, ಬೆಳ್ಳಿ ತಿನ್ನುತ್ತಾರೆ – ಬಾಳೆಹಣ್ಣು
7. ಆಕಾಶದೊಳಗಿನ ಗಿಳಿ, ಊಟದ ಹೊತ್ತಿಗೆ ರಾಣಿ – ಬಾಳೆಎಲೆ
8. ತಾಯಿ ಬರುವುದಕ್ಕೆ ಮುಂಚೆ ಮಗಳು ಮದುವೆಗೆ ಹೋದ್ಲು – ಬಾಳೆಎಲೆ
9. ಅಂಗಣ್ಣ ಮಂಗಣ್ಣ ಅಂಗಿ ಬಿಚ್ಚಿಕೊಂಡು ನುಂಗಣ್ಣ – ಬಾಳೆಹಣ್ಣು
10. ಬಡ ಬಡ ಬಂದ, ಅಂಗಿ ಕಳಚಿದ, ಬಾವಿಯೊಳಗೆ ಬಿದ್ದ – ಬಾಳೆಹಣ್ಣು

**ಅಡಿಕೆ ವಿಚಾರವಾಗಿ**

1. ಒಳನಾರು ಹೊರನಾರು ತೆಂಗು ನಾನಲ್ಲ, ಒಳಗೆ ಹರಳುಂಟು ನಾನು ಯಾರು – ಅಡಿಕೆ

2. ಒಂಟಿ ಕಾಲಿನ ಪಕ್ಷಿ ಒಂಬೈನೂರು ಮೊಟ್ಟೆ ಹಾಕ್ತದೆ – ಅಡಿಕೆಮರ
3. ಮರದಿಂದ ಬಿದ್ದವನ ಮನೆಗೆ ತಂದು ಭರದಿಂದ ಅವನ ಮೈ ಚರ್ಮವನ್ನೇ ಸುಲಿದು, ಅರೆವಾಸಿ ಬೆಂದವನ ಅಂಗಡಿಗೆ ತಂದು ನರಜನರ ಮುಂದೆ ಕ್ರಯ ಮಾಡು – ಅಡಿಕೆಕಾಯಿ

**ಮಲ್ಲಿಗೆ ಹೂ ಕುರಿತು**

1. ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ – ಮಲ್ಲಿಗೆ ಹೂ

**ಹುಣಸೆ ವಿಚಾರವಾಗಿ**

1. ಆಕಾಶದಲ್ಲಿ ಕೊಡಲಿಗಳು ತೇಲಾಡುತ್ತವೆ – ಹುಣಸೆಹಣ್ಣು
2. ದುಬ್ಬಂತ ಬಿದ್ದೆಲ್ಲೊ ದುಬ್ ಸೂಳೇಮಗನೇ, ಅಂಗಿ ಹರಿತಲ್ಲೋ ಮಂಗ್ ಸೂಳೇಮಗನೇ – ಹುಣಸೆಹಣ್ಣು

**ಕಡಲೆ ಗಿಡ**

1. ಗಿಡ್ಡ ಗಿಡದ ತುಂಬಾ ಗಿಳಿಗಳು ಕೂತಿರುತ್ತವೆ – ಕಡಲೆಗಿಡ
2. ಗಿಡಗಿಡಕ್ಕೆಲ್ಲಾ ಬುಡಬುಡಕೆ ನೆಲಗಡಲೆ – ಕಡಲೆಗಿಡ

ಈ ಪ್ರಕೃತಿಯ ವಸ್ತುಗಳು ಹೆಚ್ಚಾಗಿ ತುಮಕೂರಿನ ಭಾಗದವರು ತೆಂಗು, ಅಡಿಕೆ, ಬಾಳೆಗಳನ್ನು ಬೆಳೆಯುತ್ತಾರೆ. ಈ ಕಾರಣಕ್ಕೆ ಹೆಚ್ಚು ಹೆಚ್ಚಾಗಿ ಈ ತರಹದ ವಿಭಿನ್ನ ಒಗಟುಗಳು ಈ ವಿಷಯವನ್ನು ಕುರಿತು ಇರುವುದರಿಂದ ತುಮಕೂರು ಭಾಗದ ಒಗಟುಗಳೆನ್ನುವಲ್ಲಿ ಅಡ್ಡಿಯಿಲ್ಲ. ಇದಲ್ಲದೆ ಈ ಪುಸ್ತಕದಲ್ಲಿ ಇನ್ನೂ ಅನೇಕರ ವಿಶೇಷವಾದ ಕೆಲವೊಂದು ಒಗಟುಗಳಿವೆ. ಉದಾಹರಿಸುವುದಾದರೆ,

1. ಮರದೊಳಗೆ ಮರಹುಟ್ಟಿ ತಿನ್ನಬಾರದ ಹಣ್ಣು ಕಡುರುಚಿ – ಮಗು
2. ಚಿಕ್ಕ ಮನೆಗೆ ಚಿನ್ನದ ಬೀಗ – ನಾಲಿಗೆ
3. ಹಿಡಿದರೆ ಹಿಡಿ ತುಂಬ, ಬಿಟ್ಟರೆ ಮನೆ ತುಂಬ – ದೀಪ
4. ಕಟ್ಟೆ ಇಲ್ಲದ ಕೆರೆಯಲ್ಲಿ ತಟ್ಟೆ ತೇಲುತ್ತದೆ – ಚಂದ್ರ
5. ತೂತಿಲ್ಲದ ಒಡವೆ – ಕುಂಕುಮ
6. ಗಿಡ್ಡ ಹುಡುಗ ಅಡ್ಡಬಿದ್ದಾನ – ಹೊಸ್ತಿಲು
7. ಅವ್ವ ಅಂದ್ರೆ ಮುಟ್ಟೋದಿಲ್ಲ, ಅಪ್ಪ ಅಂದ್ರೆ ಮುಟ್ಟುತ್ತದೆ – ತುಟಿ
8. ನಾನು ನಿನ್ನ ಹತ್ತಿರ ಇದ್ದರೆ ಲಾಭ, ಇಲ್ಲದಿದ್ದರೆ ನಷ್ಟ – ವಿದ್ಯೆ
9. ನನ್ನ ಮುಟ್ಟುತ್ತಾರೆ ಆಹಾ ಎಂದು ಕಿರುಚುತ್ತಾರೆ. ಹುಡುಕಿದರೂ ನಾ ಸಿಗುವುದಿಲ್ಲ,

ನಾ ಯಾರು? – ಕರೆಂಟ್ ಶಾಕ್

10. ಸಾವಿರ ಮಕ್ಕಳಿಗೆ ಒಂದೇ ಬಂಧ – ಕಸಬರಿಕೆ
11. ಸಿಪ್ಪೆ ಇಲ್ಲದ ಹಣ್ಣು ತಂದುಕೊಡಣ್ಣ – ಬೆಣ್ಣೆ
12. ನನ್ನ ಕಂಡ್ರೆ ಎಲ್ಲಾ ಒದಿಯುತ್ತಾರೆ – ಚೆಂಡು
13. ಎಲೆ ಇಲ್ಲದ ಬಳ್ಳಿ ಊರೆಲ್ಲಾ ಹಬ್ಬಿದೆ – ವಿದ್ಯುತ್ ತಂತಿ
14. ನೀನಿಲ್ಲದೆ ಊಟವಿಲ್ಲ – ಉಪ್ಪು
15. ಲಟಪಟ ಲೇಡಿಗೆ ಒಂದೇ ಕಣ್ಣು – ಸೂಜಿ
16. ಬಿಳಿ ಲಂಗದ ಹುಡುಗಿ, ಎಳೆದರೆ ಬಾಳೆ ಬಿಟ್ಟರೆ ಓಡ್ತಾಳೆ – ಸಿಗರೇಟ್

ಈ ತರದ ಹಲವಾರು ಒಗಟುಗಳು ಈ ಪುಸ್ತಕದಲ್ಲಿನ ವಿಶೇಷ. ಇಂತಹ ಒಗಟುಗಳು ಕರ್ನಾಟಕದಾದ್ಯಂತ, ಪ್ರಾದೇಶಿಕತೆಯನ್ನು ಮೀರಿ ವಿಶ್ವವಿದ್ಯಾಲಯಗಳ ಮನ್ನಣೆ ಪಡೆದಿರುವಂತಹ ಒಗಟುಗಳಾಗಿವೆ.

ಈ ಪುಸ್ತಕದಲ್ಲಿ ಇಂತಹ ಅನೇಕ ಒಗಟುಗಳು ಇದ್ದು, ಒಂದೇ ಒಗಟು ಮತ್ತೆ ಮತ್ತೆ ಪುನರಾವರ್ತಿತವಾಗಿವೆ. ಈ ತರದ ಪುನರಾವರ್ತನೆಯ ಅನೇಕ ಒಗಟುಗಳಿವೆ. ಮುಂದಿನ ಮುದ್ರಣದಲ್ಲಿ ಸರಿಪಡಿಸಿದರೆ ಒಳ್ಳೆಯದು. ಕನ್ನಡದಲ್ಲಿ ಪ್ರಕಟವಾಗಿರುವ ಈವರೆಗಿನ ಅತ್ಯುತ್ತಮ ಒಗಟಿನ ಪುಸ್ತಕಗಳಲ್ಲಿ ಸಮಗ್ರ ವಿಷಯವನ್ನು ನೀಡುವಂತಹ ಪುಸ್ತಕವನ್ನು ಕೆ.ಸಣ್ಣಹೊನ್ನಯ್ಯನವರ "ತುಮಕೂರು ಭಾಗದ ಬಿಡಿಸಲಾಗದ ಒಗಟುಗಳು" ಕೃತಿಯನ್ನು ರಚಿಸಿದ್ದಾರೆ ಎಂದು ಹೇಳಲು ಹರ್ಷಿಸುತ್ತೇನೆ.

**ಪರಾಮರ್ಶನ ಗ್ರಂಥಗಳು:**

1. ಸಣ್ಣಹೊನ್ನಯ್ಯ ಕಂಬರಹಳ್ಳಿ, (2000), ತುಮಕೂರು ಭಾಗದ ಬಯಲಾಟದ ಬಣ್ಣದ ವೇಷಗಳು, ತುಮಕೂರು: ಪ್ರಸಾರಾಂಗ, ತುಮಕೂರು ವಿಶ್ವವಿದ್ಯಾನಿಲಯ.
2. ಶಿವಣ್ಣ ತಿಮ್ಲಾಪುರ (ಸಂ), ಶೋಧ (ಜನಪದ ಸಂಬಂಧಿಯಾದ ಲೇಖನಗಳು), ತುಮಕೂರು: ಹೇಮಚಂದ್ರ ಪ್ರಕಾಶನ.